# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 574/2023

| | | | |
|---|---|---|---|
| ಸಾಕ್ಷಿಯ ಹೆಸರು | ಃ ಮನು ಎಲ್ ಎಸ್ | ಸಿ.ಡಬ್ಲ್ಯೂ | ಃ 15 |
| ತಂದೆ ಹೆಸರು | ಃ ಸಣ್ಣೇಗೌಡ | ಪಿ.ಡಬ್ಲ್ಯೂ | ಃ 06 |
| ವಯಸ್ಸು | ಃ 38 ವರ್ಷ | ಪ್ರಮಾಣೀಕರಿಸಿದ ದಿಃ | 8/04/2026 |
| ವೃತ್ತಿ | ಃ ಹೆಚ್.ಸಿ., ಹೊಳೆನರಸೀಪುರ ಟೌನ್ | | |
| ವಾಸ | ಃ ಹೊಳೆನರಸೀಪುರ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನಾನು ದಿನಾಂಕ 30.06.2014 ರಿಂದ 20.07.2023 ರವರೆಗೆ ಹೊಳೆನರಸೀಪುರ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿಪೇದಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕಃ 12.10.2022 ರಂದು ಠಾಣಾ ಮೊ. ಸಂಖ್ಯೆ 87/2022 ಕಲಂ 297, 304ಎ, ರಡಿಯಲ್ಲಿ ಅಪಘಾತ ಪಡಿಸಿದ ಬೈಕನ್ನು ಪತ್ತೆ ಮಾಡಲು ಚಾ ಸಾ 19 ರವರು ನೇಮಿಸಿದ್ದು ಅದರಂತೆ ನಾನು ತಟ್ಟೇಕೆರೆ ಮೂಡಲಹಿಪ್ಪೆ, ಜಕ್ಕವಳ್ಳಿ ಗ್ರಾಮಗಳಿಗೆ ಭೇಟಿ ನೀಡಿ ಬಾತ್ಮಿದಾರರಿಂದ ಮಾಹಿತಿ ಪಡೆದು ಜಕ್ಕವಳ್ಳಿ ಯಲ್ಲಿ ಅರಳೀಕಟ್ಟೆ ಬಳಿ ಒಂದು ಕೆಂಪು ಬಣ್ಣದ ದ್ವಿಚಕ್ರ ವಾಹನ ನಿಂತಿದೆ ಎಂಬ ಮಾಹಿತಿ ಸಿಕ್ಕಿದ್ದು ಅದೇ ದಿನಾ ಬೆಳಿಗ್ಗೆ 9.30 ಕ್ಕೆ ಸ್ಥಳಕ್ಕೆ ಹೋಗಿ ಪರಿಶೀಲಿಸಲಾಗಿ ಅದು ಕೆ ಎ 47 ಯು 5699 ರ ಕೆಂಪು ಬಣ್ಣದ ಹಿರೋ ಹೊಂಡಾ ಸ್ಪ್ಲೆಂಡರ್ ಪ್ರೋ ಬೈಕಾಗಿತ್ತು. ನಾನು ಅದನ್ನು ಮುಂದಿನ ಕ್ರಮಕ್ಕಾಗಿ ಚಾ ಸಾ 19 ರವರ ಮುಂದೆ ಠಾಣೆಗೆ ತಂದು ಹಾಜರಿಸಿದ್ದೆ. ಅದನ್ನು ಚಾ ಸಾ 19 ರವರು ಅದೇ ದಿನಾ ಚಾ ಸಾ 10, ಚಾ ಸಾ 11 ಮತ್ತು ನನ್ನ ಸಮಕ್ಷಮ ಬೆಳಿಗ್ಗೆ 10.15 ರಿಂದ 11.00 ರವರೆಗೆ ಪೋಲೀಸ್ ಠಾಣಾ ಆವರಣದಲ್ಲಿ ಪ್ರವಾಸಿ ಮಂದಿರದ ಬಳಿ ಅಮಾನತ್ ಪಡಿಸಿಕೊಂಡರು. ಸದರಿ ಬೈಕನ್ನು ಪರಿಶೀಲಿಸಿದಾಗ ಅದು ಸುಸ್ಥಿತಿಯಲ್ಲಿತ್ತು. ಸಾಕ್ಷಿಗೆ ಬೈಕಿನ ಅಮಾನತ್ ಮಹಜರ್ ನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 12 ಮತ್ತು ಸಹಿಯನ್ನು ನಿ ಪಿ 12 (ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದ ಒಂದು ಛಾಯಚಿತ್ರವನ್ನು ನಿ ಪಿ 12(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಎಮ್ ಡಿ ಜಿ ವಕೀಲರಿಂದಃ

ಚಾ ಸಾ 19 ರವರು ನನ್ನನ್ನು ಬೆಳಿಗ್ಗೆ 9.00 ಗಂಟೆಗೆ ನೇಮಕ ಮಾಡಿರುತ್ತಾರೆ ನಾನು ಠಾಣೆಯಿಂದ 9.00 ಕ್ಕೆ ಹೊರಟಿರುತ್ತೇನೆ. ಮತ್ತು ಜಕ್ಕವಳ್ಳಿ ಗ್ರಾಮಕ್ಕೆ 9.25 ಕ್ಕೆ ತಲುಪಿರುತ್ತೇನೆ. ಮಹಜರ್ ನ್ನು ಬೈಕ್ ದೊರಕಿದ ಸ್ಥಳದಲ್ಲಿ ಮಾಡಿಲ್ಲ. ನಿ ಪಿ 12 ರಲ್ಲಿ ಬೈಕಿನ ಇಂಜಿನ್ ಮತುತ ಚಾಸೀಸ್ ನಂಬರ್ ಹೇಳಿಲ್ಲ.

2. ನನ್ನನ್ನು ಪತ್ತೆಗೆ ನೇಮಿಸಿಲ್ಲ, ನನ್ನ ಮೇಲಾಧಿಕಾರಿಗಳ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ನನ್ನನ್ನು ನೇಮಕ ಮಾಡಿದ್ದೆ ಆದಲ್ಲಿ ಹಾಜರಾತಿಯನ್ನು

ನ್ಯಾಯಾಲಯಕ್ಕೆ ಹಾಜರಿಸುತ್ತಿದ್ದೆ, ಹಾಗೆಯೇ ಹಾಜರಿಸದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಮುಕ್ತಾಯ:</u>

<u>ಮರು ವಿಚಾರಣೆ ಇಲ್ಲ:</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ